ಮಠಾಧೀಶರ ಭಾಷಣಗಳು ನಡೆದವು. ಪತ್ರಕರ್ತರೂ ಬಂದಿದ್ದರು. ಶಿವರುದ್ರಯ್ಯನೇ ವಂದನಾರ್ಪಣೆ ಮಾಡಿ 'ಸಭಿಕರಿಗೆ ಮಠದಲ್ಲಿ ಪ್ರಸಾದದ ವ್ಯವಸ್ಥೆಯಿದೆ. ಸ್ವೀಕರಿಸಿ ಹೋಗಲು' ವಿನಂತಿಸಿದ. ಚಂದ್ರಕಾಂತಯ್ಯ ಮನೆ ಕಡೆ ನಡೆದ. ಬೀದಿಲೈಟ್‌ಗಳು ಬೆಳಕನ್ನೂ ಚಲ್ಲಿದ್ದವು. ಮಠಾಧೀಶರ ಮಾತುಗಳು ನೆನಪಿಗೆ ಬಂದವು.

'ಬಸವ ತತ್ತ್ವಗಳು ಜಾತಿಭೇದ ಮಾಡುವುದಿಲ್ಲ' 'ಇವ ನಮ್ಮವ' ಎನ್ನುವ ತತ್ತ್ವವೇ ಶರಣರ ಧ್ಯೇಯ ವ್ಯಾಖ್ಯೆ', 'ಕಲ್ಯಾಣದಲ್ಲಿ ಬಸವಣ್ಣನವರು ಒಂಬತ್ತು ಶತಮಾನಗಳ ಹಿಂದೆಯೇ ಅಂತರ ಜಾತಿ ವಿವಾಹಗಳಿಗೆ ಮನ್ನಣೆ ನೀಡಿದ್ದರು', 'ಜಾತಿ ತಾರತಮ್ಯ, ಲಿಂಗತಾರತಮ್ಯ ನಮ್ಮ ಬಸವ ಧರ್ಮ ಮಾಡುವುದಿಲ್ಲ. ನಮ್ಮ ಮಠಗಳಲ್ಲಿ ಅದೇ ತತ್ತ್ವವೇ ಜಾರಿಯಲ್ಲಿದೆ' `ನಾವೂ ಅಂತರ್‌ಜಾತಿ ವಿವಾಹಗಳನ್ನು ವಿರೋಧಿಸುವುದಿಲ್ಲ. 'ಎಮ್ಮವರು ಬೆಸಗೊಂಡರೆ ಶುಭ ಲಗ್ನ' ಎನ್ನುವ ತತ್ತ್ವವನ್ನು ಪಾಲಿಸುತ್ತೇವೆ'.



## 4

ಚಂದ್ರಕಾಂತಯ್ಯ ಮನೆಗೆ ಬಂದ. ಓಣಿಯಲ್ಲಿ ಅಕ್ಕಪಕ್ಕದ ಮನೆಗಳ ಚಿಕ್ಕೋರು ಕಿಕ್ಕಿರಿದು ಇನ್ನೂ ಆಡುತ್ತಿದ್ದವು. ಬಂಕದಲ್ಲಿ ಕಪ್ಪು ಹಲಗೆ ಇತ್ತು. ಆದ್ರೆ ಮಾಂತಮ್ಮ ಬರೆದ ವಚನವನ್ನು ಅಳಿಸಲಾಗಿತ್ತು. ಆಗಲೇ ಬಸವಣ್ಣ ದೇವರ ಗುಡಿಯಲ್ಲಿ ಮಂಗಳಾರತಿ ಮುಗಿದಿರಬೇಕು ಅನ್ನಿಸಿ ತೆರೆದೇ ಇದ್ದ ಮನೆಯೊಳಗೆ ನಡೆದ. ಅಷ್ಟರಲ್ಲೇ 'ಚಂದ್ರಕಾಂತಯ್ಯ...ಅಣ್ಣಾ...' ಎಂದು ಕರೆದದ್ದು ಕೇಳಿಸಿತು. ಚಂದ್ರಕಾಂತಯ್ಯ ತಿರುಗಿ ನೋಡಿದ. ಮಂದ ಬೆಳಕಿನಲ್ಲಿ ಕಂಡ ವ್ಯಕ್ತಿಯನ್ನು 'ಅರೇ...... ನೂರೊಂದಯ್ಯಾ ಬಾ ಬಾ'–ಎಂದು ಕರೆದು ಪಡಸಾಲೆ ಏರಿದ. ನೂರೊಂದಯ್ಯನ ದನಿ ಕೇಳಿ ಮಾಂತಮ್ಮ ಅಡುಗೆ ಮನೆಯಿಂದ ಅವಸರದಿಂದಲೇ ಬಂದು 'ಬಾಣ್ಣ' ಅಂದಳು. ಗಂಡ ಬಂದದ್ದೂ ಕಂಡು 'ಬಂದಿರೇನು...' ಅಂದಳು. ಮನೆಗೆ ನೂರೊಂದಯ್ಯ ಬಂದದ್ದು ಕಂಡು ದಂಪತಿಗಳ ಮನಸ್ಸು ಬೇರೊಂದು ಜಗತ್ತಿನ ಕಡೆ ಹೋಯಿತು. ಚಂದ್ರಕಾಂತಯ್ಯನಿಗೂ ಎಂಥದ್ದೋ ಉಮೇದಿ ಕಾಣಿಸಿತು.

ಚಂದ್ರಕಾಂತಯ್ಯ, ನೂರೊಂದಯ್ಯ ಇಬ್ಬರೂ ತಮ್ಮ ಚಿಕ್ಕಂದಿನ ದಿನಗಳಿಂದ ಆದಿವಾರದ ದಿನ ಅಮವಾಸ್ಯೆ ಬಂದರೆ, ಆ ದಿನ ಹನ್ನೊಂದು ಹರದಾರಿ ದೂರದಾಗಿದ್ದ ಸಂಗಮನಾಥದ ಸಮಾಧಿಗೆ ರಾತ್ರಿಯಿಡೀ ಕಾಲ್ನಡಿಗೆಯಲ್ಲಿ ನಡೆದು, ಬೆಳಗಾಗುವ ಹೊತ್ತಿಗೆ ಜಲದುರ್ಗದ ಕೋಟೆಯೊಳಗೆ ಸೇರಿ, ನದಿಯಲ್ಲಿ ಮುಳುಗೆದ್ದು ಸಂಗಮನಾಥನ ಸನ್ನಿಧಿಯಲ್ಲಿ ಕುಂತು ಭಜನೆ ಮಾಡುವುದು. ಭಕ್ತರು ನೀಡಿದ ಪ್ರಸಾದ ಪಡೆಯುವುದು. ಆ ದಿನ ಸುತ್ತಲೂರಿನ ನಾನಾ ಜಾತಿಯ ಜನ ಬಂದು ಭಜನೆ ಮಾಡುತ್ತ, ಧ್ಯಾನ ಮಾಡುತ್ತ ಹಗಲು-ರಾತ್ರಿ ಕಳೆದು ಮರುದಿನ ತಮ್ಮ ತಮ್ಮ ಊರುಗಳಿಗೆ ಎಂಥದ್ದೊ ಶಕ್ತಿ ಪಡೆದು ಮರಳುವುದು ಸಂಪ್ರದಾಯ. ಇವರಿಬ್ಬರು ಈ ಇಳಿವಯಸ್ಸಿನಲ್ಲಿಯೂ ಹೋಗಿ ಬರುತ್ತಿದ್ದರು. ಮಾಂತಮ್ಮ ಹಲವು ಸಲ ಜತೆಗೆ ನಡೆದಿದ್ದಳು.

'ಅದೇ ನೆನಪಿಸಿ ನೋಡಣಾಂತ ಬಂದೆ' ಅಂದ ನೂರಂದಯ್ಯ.

'ಪಾಡಾಯ್ತು. ಇವತ್ತು ರಾತ್ರಿನೇ ಹೊರಡಬೇಕು' ಚಂದ್ರಕಾಂತಯ್ಯ.

'ಹೌದು ಮತ್ತೆ!'

'ನಾನೂ ಬರ್ತಿನಿ. ಮೈಯಾಗಿನ ಚಿಂತೆಗಳು ಮಾಯ ಆಗ್ತವೆ' ಎಂದಳು ಮಾಂತಮ್ಮ.

ಚಂದ್ರಕಾಂತಯ್ಯನ ಮನಸ್ಸು ಕಪ್ಪು ಹಲಗೆ ಕಡೆ ಹೋಯಿತು.

'ನಡೆ-ನುಡಿ ಒಂದಾಗಿಸಿಕೊಳ್ಳದ ಮಠಾಧೀಶರ ಹುಸಿ ಘೋಷಣೆಗಳು ನಿನ್ನೆ ಮಠದಲ್ಲಿ ಮೊಳಗಿದವು'.

'ಮಠಾಧೀಶರಿಗೆ ಪೋಕ್ಸೊ ಕಾನೂನಿನ ಅರಿವು ಇರಬೇಕು' ಎಂದು ಬರೆಯಲು ತೀರ್ಮಾನಿಸಿದ.

'ತಯಾರಾಗಿ ಬರ್ತಿನಿ' ಎಂದು ನೂರೊಂದಯ್ಯ ಉಮೇದಿಯಿಂದ ಹೇಳಿ ಹೊರಟ.

●